ಪಾಲಾಗುತ್ತಿದ್ದವು. ಅದರ ಕಂಪನ್ನು ಬೆಳಗ್ಗೆಯೂ ಉಳಿಸಿಕೊಳ್ಳಲು ಅವಳು ಅದನ್ನು ಕೂದಲಿನೊಳಗೆ ಸೇರಿಸಿ ದೊಡ್ಡ ತುರುಬು ಕಟ್ಟುತ್ತಿದ್ದಳು. ಆದರೂ ಆಳು ಸಂಕವ್ವ, "ಪದ್ದಕ್ಕ ಓಡಾಡಿದರೆ ಹೂವಿನ ವಾಸನಿ ಬರ್ತೇತಿ" ಎಂದಾಗ ಭಾಗಕ್ಕ ನಸುನಗುತ್ತಿದ್ದರು. ಅತ್ತೆಯೊಂದಿಗೆ ಮಲಗಿದ ಪದ್ಮ ರಾತ್ರಿ ಯಾವುದೋ ಸಮಯಕ್ಕೆ ಗಂಡನ ತೆಕ್ಕೆಗೆ ಹೋಗಿಬರುತ್ತಿದ್ದುದಿತ್ತು. ಭಾಗಕ್ಕ ಕೂಡ ಹಾಗೇ ದಿನಗಳನ್ನು ಕಳೆದಿದ್ದರು. ರಾತ್ರಿಯೇ ಪತಿ ಎಲ್ಲಿ ಮಲಗಿರುವನೆಂದು ನೋಡಿಕೊಳ್ಳುವುದಿತ್ತು. ಹೆಸರಾಂತ ಕುಲಕರ್ಣಿಗಳ ಮನೆತನ. ಸದಾ ನೆಂಟರಿಷ್ಟರು ತುಂಬಿರುತ್ತಿದ್ದ ಮನೆ. ಯಾರ ಬಾಯಿಗೂ ಆಹಾರವಾಗಬಾರದಲ್ಲ.

ಘಟಪ್ರಭೆ ಶಾಂತವಾಗೇ ಹರಿಯುತ್ತಿದ್ದಾಗ ದೊಡ್ಡ ಸುಳಿ ಬಂದು ಕುಲಕರ್ಣಿಗಳ ದೋಣಿಯನ್ನು ಅಲ್ಲಾಡಿಸಿತ್ತು. ವಾಸಣ್ಣ ಹಾವು ಕಚ್ಚಿ ಹೊಲದಲ್ಲೆ ಇಲ್ಲವಾಗಿದ್ದ. ಭಾಗಕ್ಕ ಓಡಿ ಬರುವವರೆಗೂ... ವೈದ್ಯರು ಬರುವವರೆಗೂ ತಡೆದಿರಲಿಲ್ಲ. ಭಾಗಕ್ಕ ಕಣ್ಣೀರಿನ ಕೋಡಿ ಹರಿಸಿದರು. ಹೆತ್ತಮಗನಂತೆ ಪ್ರೀತಿಸಿದ್ದರಲ್ಲ... ಎಲ್ಲರೂ ಅತ್ತು ಸೊರಗಿದರು. ಕೆಲವು ದಿನಗಳ ನಂತರ ಪದ್ಮ, ಕೃಷ್ಣರಿಗೆ ಬೈಗುಳವಿಲ್ಲದೇ ನಿರಾಳವೆನಿಸಿತು. ಆದರೆ, ಪರಿಣಾಮ ನಿಧಾನವಾಗಿ ಗೋಚರವಾಗಿತ್ತು. ನಿಂಗಪ್ಪ ಮುದುಕನಾಗಿ ಮಾತಿನ ಜೊತೆ ಬೆಲೆಯನ್ನೂ ಕಳೆದುಕೊಂಡಿದ್ದ. ಮಾದೇಶನದೇ ಎಲ್ಲ ಪಾರುಪತ್ಯ. ಈಗ ಮನೆ ಮುಟ್ಟುವ ಕಾಳುಗಳಲ್ಲಿ ಕಡಿತವಾಗಿತ್ತು. ಕೃಷ್ಣ ಮಾತನಾಡಲಿಲ್ಲ. ಇದೇ ಮುಂದಿನ ವರ್ಷವೂ ಮುಂದುವರೆದು ಮೊದಲಿನ ಅರ್ಧದಷ್ಟೇ ಚೀಲಗಳು ಮನೆ ಸೇರಿದವು. ಕೃಷ್ಣ ಹಿಂದೆ ಕುಸುಕುಸು ಅಂದರೂ ಮುಂದೆ ಮೂಕನಾದ. ಭಾಗಕ್ಕನೇ ಮಾತನಾಡಿದರು. "ಮಾದೇಶ, ನೀವೂ ನಾವೂ ಒಂದ ಮನಿಯಾವ್ರಗತೆ ಇದ್ವಿ. ಎಷ್ಟ ಫಸಲು, ಪೀಕು ಬರ್ತದ ನನಗೂ ಗೊತ್ತದಪಾ..." ಎಂದಾಗ ಅವನು ಕೊಂಚವೂ ಅಳುಕದೇ, "ಹೌದ್ರಿ ಅವ್ವಾರ... ಆವಾಗ ವಾಸಣ್ಣಾರು ಹತ್ತಾಳಿನ ಕೆಲಸಾ ಒಬ್ಬರ ಮಾಡ್ತಿದ್ರು. ಈಗ ಎಷ್ಟ ಆಳು ಹಚ್ಚತೇವಿ. ಪುರೋಟ ಆಗೂದಿಲ್ರಿ. ಬೇಕಾದ್ರ ಗೇಣಿಗೆ ಬಿಡ್ರಿ" ಎಂದ. ವಿಠ್ಠಲ ಮತ್ತು ಊರ ಹಿರಿಯರ ಸಲಹೆಯಂತೆ ಗೇಣಿಗೆ ಬಿಟ್ಟರು. ಎರಡು ವರ್ಷಗಳು ಕಳೆದರೂ ಉಪಯೋಗವಾಗಲಿಲ್ಲ. ಈಗ ಮಾದೇಶ, "ಇಷ್ಟು ದಿವ್ಸ ನಿಮ್ಮ ಹೊಲಾ ಮಾಡೇವಿ. ಕಾಯ್ದೆ ನಮ್ಮಗತೆ ಅದ. ನಮಗ ಮಾರಿಬಿಡ್ರಿ" ಎಂದು ಪಟ್ಟು ಹಿಡಿದ. ಪಾಟೀಲರು... ಗೌಡರು, "ಹೊಲಕ್ಕ ಹೋಗಿ ನೋಡಕೊಳ್ಳದ ಹೊರತು ಅವರು ಕೇಳೂದಿಲ್ಲರಿ. ಕೃಷ್ಣಾ ಹೋಗೂದುಲ್ಲ. ದಿನಾ ಗುದ್ದ್ಯಾಡೊದಕ್ಕಿಂತಾ ಮಾರಿಬಿಡೋದ ಛೊಲೊ" ಎಂದು ಸಲಹೆ ನೀಡಿದರು. ಭಾಗಕ್ಕನಿಗೆ ಹೊಟ್ಟೆಯಲ್ಲಿ ಕತ್ತರಿಯಾಡಿಸಿದಂತಾಯಿತು. "ಯಾಕರ ಇಂಥಾ ಕಾಯದೆ ಮಾಡ್ತಾರೋ?... ನಮ್ಮನ್ನ ಪರದೇಶಿ ಮಾಡ್ಲಿಕ್ಕೆ..." ಎಂದು ಸಂಕಟಪಟ್ಟರು. ಆದರೆ, ಅನಿವಾರ್ಯವಾಗಿತ್ತಲ್ಲ...

ವಿಠ್ಠಲ ಬಂದ. ಮಾರಿದ ದುಡ್ಡಿನಲ್ಲಿ ಭಾಗವೂ ಆಯಿತು. ಹೆಣ್ಣು ಮಕ್ಕಳಿಗೆ ಒಂದಷ್ಟು ಕೊಟ್ಟು ಉಳಿದದ್ದನ್ನು ವಿಠಲ, ಕೃಷ್ಣ ಹಂಚಿಕೊಂಡರು. ವಿಠ್ಠಲ, "ಮನಿ ಕಟ್ಟಸಬೇಕಂತ ಮಾಡೇನ್ರಿ ವೈನಿ. ಇಲ್ಲಾಂದ್ರ ನಾ ಪಾಲ ತೊಗೋತಿದ್ದಿದ್ದಿಲ್ಲ" ಎಂದ. ಪದ್ಮ ಕೂಡ, "ಇರ್ಲಿ ಬಿಡ್ರಿ ಭಾವಜಿ. ತಾವ್ರುದ ದುಡ್ಡು ತಾಯಿ ಮಕ್ಕಳಿಗೆ ತಂದಿಡತದಂತ. ಚೊಕ್ಕ ಇದ್ದರಾತು" ಎಂದಳು. ಭಾಗಕ್ಕ ತಮ್ಮ ಒಡವೆಗಳನ್ನೂ ತಂದಿಟ್ಟರು. ರಕುಮಾ, "ವೈನಿ... ನಾವು ಊರಿಂದೂರಿಗೆ ಅಡ್ಯಾಡಾವ್ರು. ಮಡಿ... ಮೈಲಿಗಿ ಆಗೂದುಲ್ಲ. ನೀವು ಎಲ್ಲಾ ಮಾಡಕೋತ ಬಂದೀರಿ. ಹೆಚ್ಚು ತೊಗೊರಿ" ಎಂದಾಗ ಪದ್ಮಳ ಮುಖ ಊರಗಲವಾಗಿತ್ತು. ಭಾಗಕ್ಕನ ಮುಖದ ಮೇಲೆ ವ್ಯಂಗ್ಯನಗೆ ತೇಲಿತ್ತು. ರಕುಮಾ ಆಧುನಿಕತೆಯನ್ನು ಮೈಗೂಡಿಸಿಕೊಂಡವಳು. ಅತ್ತೆಯ ಮಡಿಹುಡಿ 'ಸಾಧ್ಯವೇ ಇಲ್ಲ' ಎನ್ನುವ ಭಾವದಲ್ಲಿ ದೂರವೇ ಉಳಿದುಬಿಟ್ಟಳು.

ಇನ್ನು ಕೊಣ್ಣೂರಿನಲ್ಲಿದ್ದು ಸಾಧಿಸುವುದಾದರೂ ಏನಿತ್ತು? ಸಮೀರನ ವಿದ್ಯಾಭ್ಯಾಸಕ್ಕೋಸ್ಕರ ಪದ್ಮ